ರಾಯಚೂರು ಸೀಮೆಯ ಬಿಸಿಲು–ಬೆಳುದಿಂಗಳನ್ನು ತಮ್ಮ ಕಥೆಗಳ ಮೂಲಕ ಮೊಗೆಮೊಗೆದು ಕೊಡುತ್ತಿರುವ ಮಹಾಂತೇಶ ನವಲಕಲ್ ಅವರದು ಸಮಕಾಲೀನ ಕಥೆಗಾರರಲ್ಲಿ ಮುಖ್ಯ ಹೆಸರು. ನಾಟಕಕಾರರಾಗಿಯೂ ಪ್ರಸಿದ್ಧರಾದ ಅವರು, ತಮ್ಮ ಕೃತಿಗಳಲ್ಲಿ ಚರಿತ್ರೆ ಮತ್ತು ಇತಿಹಾಸವನ್ನು ಮುಖಾಮುಖಿಯಾಗಿಸುವ ಮೂಲಕ ಸಹೃದಯರ ಗಮನಕ್ಕೆ ತರುವ ಅರಿವು ಮಹತ್ವದ್ದು. 'ನೀರಿನ ನೆರಳು', 'ಭಾರತ ಭಾಗ್ಯ ವಿಧಾತ' ಕಥಾಸಂಕಲನಗಳು, 'ನಾನು ಚಂದ್ರಗುಪ್ತನೆಂಬ ಮೌರ್ಯ', 'ಪಂಚಾವರಂ' ನಾಟಕಗಳು ಮಹಾಂತೇಶರ ಜನಪ್ರಿಯ ಕೃತಿಗಳು.

ಒಪ್ಪಿಸಿದ್ದರು. ಅವರನ್ನು ಎದುರಿಗೆ ಹಾಕಿಕೊಂಡು ಕುಳಿತಾಗಲೇ ಈ ಅಲೆಗ್ಸಾಂಡರ್ ಎಂಬ ಆಕ್ರಮಣಶೀಲ ಹದ್ದು ಯಜಮಾನನಂತಿದ್ದ ಇವನಿಗೂ, 'ಪಾಲಿನಲ್ಲಿನ ತಾರತಮ್ಯದ ವಿರುದ್ಧ ಪ್ರತಿಭಟಿಸಿ ಸಾಧ್ಯವಾದರೆ ನಿನ್ನ ಕಣ್ಣನ್ನೂ ಕೀಳಲು ಹಿಂದೆ ಮುಂದೆ ನೋಡುವುದಿಲ್ಲ' ಎನ್ನುವಂತೆ ಇವನ ಮುಂದೆ ನಿಂತ್ತಿತ್ತು. ಅರೆಜೀವ ಹಿಡಿದ ಒಬ್ಬ ತಮ್ಮ 'ಎಣ್ಣಾ ನನ್ನ ಕೊಲ್ಲೋ, ಸಾವಿನ ಸುಖ ಕೊಡೋ, ಈ ಭವದ ನೋವಿನಿಂದ ನನ್ನನ್ನು ಮುಕ್ತನನ್ನಾಗಿ ಮಾಡು' ಎಂದು ಅಂಗಾಲಾಚುತ್ತಲೇ ಇದ್ದ. ಇವನು ಆಕಾಶವನ್ನೇ ದಿಟ್ಟಿಸುತ್ತಾ ಅವನ ಆರ್ತನಾದದ ಭಾಷೆ ಬದಲಾಯಿಸಲು ತಮ್ಮನ ಎದೆಗೆ ಗುಂಡಿಟ್ಟು ಗುಂಡಿಗೆಯನ್ನೇ ಛಿದ್ರ ಮಾಡಿದ್ದ. ಕರುಳುಬಳ್ಳಿಯನ್ನು ಕೊಂದದ್ದು ಪುಣ್ಯವೋಪಾಪವೋ? ಆದರೆ, ಆ ಕ್ಷಣದಲ್ಲಿ ಆ ನೋವಿನಿಂದ ಪಾರು ಮಾಡಿದ ತಾತ್ಕಾಲಿಕ ಪುಣ್ಯ ಅವನಿಗೆ ದಕ್ಕಿತ್ತು. ಈ ಯುದ್ಧ ಮುಗಿದ ಮೇಲೆ ತಾನೂ ಸಾಯಬೇಕು ಯಾಕೆಂದರೇ ಹೊರಲಾರದಷ್ಟು ಪಾಪದ ಗಂಟು ಹೆಗಲಮೇಲಿದೆ. ಆದರೆ ತಾನು ಸತ್ತರೆ, ತಮ್ಮನ ಮಕ್ಕಳು, ಹೆಂಡಿರು ಅನಾಥರಾಗುತ್ತಾರೆ ಎಂದು ಅಂದು ರಣಾಂಗಣದ ಮಧ್ಯೆ ಆಕಾಶ ದಿಟ್ಟಿಸುತ್ತಾ, ನಕ್ಷತ್ರಗಳ ಎಣಿಸುತ್ತಾ ಕಾಲ ಕಳೆದ. ಭೂಮಿಯ ಈ ಕೆಂಪು ಕಲೆಗಳಿಗಿಂತ ಆಕಾಶ ಶುಭ್ರವಾಗಿತ್ತು. ಅಮ್ಮ ಹೇಳುತ್ತಿದ್ದಳು 'ಸತ್ತ ಮನುಜರು ಕೆಲ ದಿನ ಆ ದಿವ್ಯ ಧ್ರುವನಕ್ಷತ್ರದಲ್ಲಿ ಇರುತ್ತಾರಂತೆ' ಇವನು ಎಲ್ಲರನ್ನೂ ನೋಡುವ ಆಸೆಯಿಂದ ಮುಂಜಾನೆ ನಾಲ್ಕರ ಸಮಯಕ್ಕಾಗಿ ಕಾಯ ಹತ್ತಿದ. ಒಮ್ಮಿಂದೊಮ್ಮೆಲೆ ಆಕಾಶದ ಮಧ್ಯದಲ್ಲಿ ಕಾಣಿಸಿಕೊಂಡ ಧ್ರುವನಕ್ಷತ್ರವನ್ನು ದಿಟ್ಟಿಸಿದ, ಆ ಧ್ರುವನಕ್ಷತ್ರದಲ್ಲಿ ಮೂವರು ತಮ್ಮಂದಿರು, ಮರ್ಲಿನ್ ಎಂಬ ಅವಳು ಕಾಣಿಸಿಕೊಂಡಂತೆ ಹಾಗೂ ಅವರು ಜೋಕಾಲಿಯಲಿ ಜೀಕುತ್ತಿದ್ದಾರೆ ಎಂದೆಣಿಸಿತು ಅವನಿಗೆ.

ಮರ್ಲಿನ್ ಬಗ್ಗೆ ಹೇಳಲೇಬೇಕು. ಅವಳು ಶತ್ರು ದೇಶದ ಪಾಳೆಯದವಳು. ಇಲ್ಲಿ ಗೂಢಚಾರಿಕೆ ಮಾಡಲು ಬಂದಿದ್ದವಳು. ಕೊನೆಕೊನೆಗೆ ಇವನ ಪ್ರೇಮಪಾಶದಲಿ ಬಿದ್ದು, ತನ್ನ ಮೂಲ ಕೆಲಸವನ್ನೇ ಮರೆತುಬಿಟ್ಟಿದ್ದಳು. ಸಂಜೆ ಅವಳ ಜೊತೆ ಕಳೆದ ಕಾಲವು ಅಮೋಘವಾಗಿತ್ತು. ಯುದ್ಧವೆಂಬುದು ಭಯ ತಲ್ಲಣಗಳ ಗೂಡಾಗಿ ರಣಾಂಗಣದ ಡೇರೆ ಎಂಬುದು ಅವಳ ಜೊತೆ ಮೈಫಿಲ್‌ಗೆ ಒಳಗಾಗುವ ರಂಗುರಂಗಿನ ತಾಣವಾಗುತ್ತಿತ್ತು. ರಣಾಂಗಣವನ್ನು ಎರಡು ಭಾಗವಾಗಿ ಅವನು ಭಾಗಿಸಿಕೊಂಡಿದ್ದ. ಸಂಜೆಯಾಗುತ್ತಲೇ ಮರ್ಲಿನ್‌ಳ ಸಂಗದಲಿ ಒಂದಾಗುತ್ತಿದ್ದ ಅವನು, ಹಗಲೆಂಬ ನರಕದಿಂದ ಸಂಜೆಯೆಂಬ ಸ್ವರ್ಗಕ್ಕೆ ಹೋಗಲು ಚಡಪಡಿಸುತ್ತಿದ್ದ. ಮರ್ಲಿನ್ ಇವನ ಮೈಗೆ ಮೆತ್ತಿದ್ದ ರಣಯುದ್ಧದ ಮೈಲಿಗೆಯನ್ನು ತೊಳೆದು ಕಳುಹಿಸುತ್ತಿದ್ದಳು. ಆದರೆ ಈಗ ಆ ರಣಭೂಮಿಯಲ್ಲಿ ತಾನು ಮತ್ತು ಆ ರಣಹದ್ದುಗಳು ಮಾತ್ರ.

ದಂಡನಾಯಕ ಥಾಮಸ್ ದಿನಾಲು ಒಂದು ಗಂಟೆ ಸೈನ್ಯವನ್ನು ಅಭಿಪ್ರೇರಿಸಿ ತನ್ನ ಏಳುಸುತ್ತಿನ ಕೋಟೆಯ ಒಳಗೆ ಕುಡಿಯುತ್ತಾ, ತಿನ್ನುತ್ತಾ ಬಂಧಿಯಾಗುತ್ತಿದ್ದ. ಅವನು ಉಸಿರುತ್ತಿದ್ದುದು ಬರೀ ಸುಳ್ಳುಗಳ ಶ್ವಾಸವನ್ನೆ. ಈ ರಣಭೂಮಿಯಲ್ಲಿ ಭಾರತೀಯರೇ ಒಂದು ಲಕ್ಷದಷ್ಟಿದ್ದರು. ಆ ನಾಡಿಮಿಡಿತ ಗೊತ್ತಿದ್ದ ಥಾಮಸ್, 'ಇಲ್ಲಿ ಸತ್ತವರು ನೇರವಾಗಿ ಸ್ವರ್ಗಕ್ಕೆ ಹೋಗುತ್ತಾರೆ. ಅದು ಇದಕ್ಕಿಂತಲೂ ಪರಮೋಚ್ಛಲೋಕ. ಆ ಲೋಕದ ಬಗ್ಗೆ ನೀವು ಆಸ್ಥೆವಹಿಸಿ ಅದನು ಪಡೆದುಕೊಳ್ಳಿ' ಎಂದು ಹೇಳುತ್ತಿದ್ದ. ಅವನ ಈ ನುಡಿಗಳು ಬಂದಿದ್ದು ಸಹಾ ಭಾರತದಲ್ಲಿ ಅನೇಕ